

# ದೃಷ್ಟಿದೀಪವ, ಬನ್ನಿ ಹಚ್ಚುವ...

ನಿನ್ನೆಯ ದಿನ ಬೆಂಗಳೂರಿನಲ್ಲಿ 600ರಿಂದ 800 ಕಣ್ಣುಗಳು ಮಣ್ಣುಪಾಲಾದವು. ನಿನ್ನೆಯಷ್ಟೇ ಅಲ್ಲ, ನೀವು ಈ ಲೇಖನ ಓದುತ್ತಿರುವ ಇಂದು ಕೂಡ ಅಷ್ಟೇ ಪ್ರಮಾಣದ ಕಣ್ಣುಗಳು ಹಾಳಾಗಲಿವೆ. ನಾಳೆಯದು, ನಾಡಿದ್ದಿನ 'ಕಣ್ಬರ'ಹವೂ ಅಷ್ಟೇ!

ದಿನವೊಂದಕ್ಕೆ ನೂರಾರು ಕಣ್ಣುಗಳು ಹಾಳಾಗುವುದೆಂದರೇನು? ಆ ಲೆಕ್ಕಾಚಾರ ಹೀಗಿದೆ: ಬೆಂಗಳೂರಿನಲ್ಲಿ ಬೇರೆ ಬೇರೆ ಕಾರಣಗಳಿಂದಾಗಿ ಪ್ರತಿನಿತ್ಯ 300ರಿಂದ 400 ಮಂದಿ ಸಾಯುತ್ತಿದ್ದಾರೆ ಎನ್ನುವ ಅಂದಾಜಿದೆ. ಹೀಗೆ ಸಾಯುವವರ ಸಂಖ್ಯೆಯನ್ನು 2ರಿಂದ ಗುಣಿಸಿದರೆ ವ್ಯರ್ಥವಾಗುತ್ತಿರುವ ಕಣ್ಣುಗಳ ಸಂಖ್ಯೆ ದೊರೆಯುತ್ತದೆ. ರಾಜಧಾನಿಯದ್ದೇ ಈ ಕಥೆಯಾದರೆ, ರಾಜ್ಯದೆಲ್ಲೆಡೆಯ ಸಾವಿನ ಪ್ರಮಾಣ ಅಂದಾಜು ಮಾಡಿದರೆ ನಿತ್ಯ ಸಾವಿರ ಕಣ್ಣುಗಳಾದರೂ ಮಣ್ಣುಪಾಲಾಗುತ್ತಿರಬಹುದು.

ಮನುಷ್ಯ ಸತ್ತಮೇಲೆ ಕಣ್ಣುಗಳು ವ್ಯರ್ಥವಾಗದಿರಲು (ಸಾಯದಿರಲು) ಸಾಧ್ಯವೇ ಎನ್ನದಿರಿ. ದೃಷ್ಟಿಗಾಗಿ ಕಾಯುತ್ತಿರುವ ಲಕ್ಷಾಂತರ ಅಂಧರ ಬದುಕನ್ನು ಕಲ್ಪಿಸಿಕೊಳ್ಳುವುದು ನಿಮಗೆ ಸಾಧ್ಯವಾಗುವುದಾದರೆ, ವ್ಯರ್ಥವಾಗುತ್ತಿರುವ ಕಣ್ಣುಗಳ ಮಹತ್ವ ಅರ್ಥವಾದೀತು.

ನಮ್ಮ ದೇಶದಲ್ಲಿ ಸುಮಾರು 30 ಲಕ್ಷ ಮಂದಿ ಮಂದಿ ಅಂಧರು ಕಣ್ಣುಗಳ ನಿರೀಕ್ಷೆಯಲ್ಲಿದ್ದಾರೆ. ದಾನಿಗಳಿಂದ ಕಣ್ಣುಗಳು ದೊರೆಯುವುದಾದರೆ, ಇವರೆಲ್ಲರ ಬದುಕಿನಲ್ಲಿ ಬೆಳಕು ಮೂಡುವುದು ಸಾಧ್ಯವಿದೆ. ವಿಪರ್ಯಾಸ ನೋಡಿ, ನೇತ್ರದಾನಿಗಳ ಸಂಖ್ಯೆ 1 ಲಕ್ಷವನ್ನೂ ದಾಟಿಲ್ಲ. ಕರ್ನಾಟಕದ ಲೆಕ್ಕಾಚಾರ ನೋಡಿ: ನಮ್ಮ ರಾಜ್ಯದಲ್ಲಿ ಸುಮಾರು ಒಂದು ಲಕ್ಷ ಮಂದಿ ಕಣ್ಣುಗಳ ನಿರೀಕ್ಷೆಯಲ್ಲಿದ್ದರೆ, ಇಲ್ಲಿರುವ ನೇತ್ರದಾನಿಗಳ ಸಂಖ್ಯೆ ಎರಡರಿಂದ ಎರಡೂವರೆ ಸಾವಿರ ಮಾತ್ರ. ಈಗ ಹೇಳಿ, ರಾಜ್ಯದಲ್ಲಿ ಪ್ರತಿದಿನ ಮಣ್ಣುಪಾಲಾಗುತ್ತಿರುವ ಸಾವಿರಾರು ಕಣ್ಣುಗಳ ಲೆಕ್ಕಾಚಾರ ಕಣ್ಣಿಗೆ ಕತ್ತಲೆ ಕವಿಸುವಂತಿಲ್ಲವೆ?

ಭಾರತದಲ್ಲಿ ಪ್ರತಿ ವರ್ಷ ಕನಿಷ್ಠ 80 ಲಕ್ಷ ಮಂದಿ ಸಾಯುತ್ತಿದ್ದಾರೆ. ಸತ್ತವರೆಲ್ಲರೂ ನೇತ್ರದಾನ ಮಾಡಿದರೆ 1.60 ಕೋಟಿ ಕಣ್ಣುಗಳು ಸಂಗ್ರಹಗೊಂಡು, ಕಣ್ಣಿನ ಅವಶ್ಯಕತೆ ಇದ್ದವರಿಗೆಲ್ಲ ಒಂದೇ ದಿನದಲ್ಲಿ ಕಣ್ಣು ಪೂರೈಸಬಹುದಿತ್ತು. ಆದರೆ ಪ್ರಸ್ತುತ ಸಂಗ್ರಹವಾಗುತ್ತಿರುವುದು 50ರಿಂದ 60 ಸಾವಿರ ಕಣ್ಣುಗಳಷ್ಟೇ. ಅಂದರೆ ನೇತ್ರದಾನ ಮಾಡುತ್ತಿರುವವರ ಸಂಖ್ಯೆ ದೇಶದಲ್ಲಿ 25 ಸಾವಿರದಿಂದ 30 ಸಾವಿರ ಮಂದಿಯಷ್ಟೇ.

ನಮ್ಮಲ್ಲಿ ಶೇ. 99ರಷ್ಟು ಕಣ್ಣುಗಳು ವ್ಯರ್ಥವಾಗುತ್ತಿವೆ ಎನ್ನುವುದು ಏನನ್ನು ಸೂಚಿಸುತ್ತದೆ? ಮಾನವೀಯತೆ ಕುರುಡಾಗಿರುವುದನ್ನೇ ಅಥವಾ ಅರಿವಿಗೆ ಅಂಧತ್ವ ಕವಿದಿರುವುದನ್ನೇ?

ಜನರಲ್ಲಿ ನೇತ್ರದಾನದ ಮಹತ್ವದ ಅರಿವು ಮೂಡಿಸುವುದು ಹೇಗೆ? ಅದಕ್ಕಾಗಿ



> ‘ಮೃತರನ್ನು, ಅವರ ದೇಹದ ಯಾವುದೋ ಒಂದು ಭಾಗವಿಲ್ಲದೇ ಅಂತ್ಯಸಂಸ್ಕಾರ ಮಾಡಿದರೆ ಮುಂದೆ ಆ ಅಂಗವಿಲ್ಲದೇ ಹುಟ್ಟುತ್ತಾರೆ ಎನ್ನುವ ಮೂಢನಂಬಿಕೆ ಜನರಲ್ಲಿದೆ.
>
> ಡಾ. ಬಿ.ಎಲ್. ಸುಜಾತಾ ರಾಥೋಡ್
> ಮಿಂಟೊಕಣ್ಣಿನಆಸ್ಪತ್ರೆಯನಿರ್ದೇಶಕಿ